ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ – ೨೨**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತಮೂರನೇ ಅಧಿವೇಶನ
## (ಮುಂದುವರೆದ ಉಪವೇಶನಗಳು)
## ಗುರುವಾರ, ದಿನಾಂಕ: ೧೫ನೇ ಜೂನ್, ೨೦೧೭

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಗೃಹ ಸಚಿವರು

೩. ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು

೪. ನಗರಾಭಿವೃದ್ಧಿ ಹಾಗೂ ಹಜ್ ಸಚಿವರು

---

## ಬೆಂಗಳೂರು ನಗರ ವ್ಯಾಪ್ತಿಯ ಕೆರೆಗಳಲ್ಲಿ ಕಂಡು ಬರುವ ನೊರೆಗಳ ನಿಯಂತ್ರಣ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೧೬ (೩೧೨೪) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು ; ಅವುಗಳು ಯಾವುವು ; ಅವುಗಳ ವಿಸ್ತೀರ್ಣವೆಷ್ಟು ; ಅವುಗಳಲ್ಲಿ ಒತ್ತುವರಿಯಾದ ವಿಸ್ತೀರ್ಣವೆಷ್ಟು ; ಈ ಒತ್ತುವರಿಯನ್ನು ತೆರವು ಮಾಡಿದ ಕೆರೆಯ ವಿಸ್ತೀರ್ಣವೆಷ್ಟು ; ಒತ್ತುವರಿ ತೆರವು ಮಾಡದಿರಲು ಕಾರಣವೇನು ;

(ಆ) ಕೆರೆಗಳಲ್ಲಿ ನೊರೆ ಉತ್ಪಾದನೆಯಾಗಲು ವೈಜ್ಞಾನಿಕ ಕಾರಣವೇನು ; ಎಷ್ಟು ಕೆರೆಗಳಲ್ಲಿ ನೊರೆ ಉತ್ಪಾದನೆಯಾಗುತ್ತಿದೆ ; ಇದನ್ನು ನಿಯಂತ್ರಿಸಲು ತಜ್ಞರ ಸಮಿತಿ ರಚಿಸಲಾಗಿದೆಯೇ ; ಮತ್ತು ವರದಿಯನ್ನು ಪಡೆಯಲಾಗಿದೆಯೇ ;

(ಇ) ನೊರೆಯನ್ನು ನಿಯಂತ್ರಿಸಲು ತೆಗೆದುಕೊಂಡ ಕ್ರಮಗಳೇನು ; ಇನ್ನು ಕೂಡಾ ನಿಯಂತ್ರಿಸಲು ಅಸಾಧ್ಯವಾದ ಕಾರಣ ಅಂತರರಾಷ್ಟ್ರೀಯ ತಜ್ಞರ ಸಲಹೆಯನ್ನು ಪಡೆಯಲಾಗುವುದೇ ; ಇಲ್ಲವಾದಲ್ಲಿ, ನೊರೆಯ ಸಮಸ್ಯೆಯನ್ನು ಯಾವಾಗ ಪರಿಹಾರ ಮಾಡಲಾಗುವುದು ?

**ಬೆಂಗಳೂರಿನ ರಾಜಕಾಲುವೆ ಒತ್ತುವರಿ ತೆರವು ಕಾರ್ಯದ ಬಗ್ಗೆ**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೧೭ (೩೦೭೪) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ರಾಜಕಾಲುವೆ ಒತ್ತುವರಿ ತೆರವು ಕಾರ್ಯ ನಡೆಸಿದ ಒಟ್ಟು ಪ್ರಕರಣಗಳೆಷ್ಟು ; ಉಳಿದಿರುವ ಪ್ರಕರಣಗಳೆಷ್ಟು ; (ವಿವರ ನೀಡುವುದು)

(ಆ) ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಬಿಟ್ಟು ಉಳಿದ ಪ್ರಕರಣಗಳಲ್ಲಿ ತೆರವು ಕಾರ್ಯಗಳನ್ನು ಮಾಡದಿರಲು ಕಾರಣಗಳೇನು ;

(ಇ) ಒತ್ತುವರಿ ತೆರವು ಕಾರ್ಯಗಳನ್ನು ನಿಲ್ಲಿಸಲು ಕಾರಣಗಳೇನು ; ಇದೀಗ ಮಳೆಗಾಲ ಪ್ರಾರಂಭವಾಗಿದ್ದು ಒತ್ತುವರಿಯನ್ನು ತೆರವುಗೊಳಿಸದಿದ್ದರೆ ಆಗುವ ಪರಿಣಾಮಗಳ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಲೋಚಿಸಿದೆಯೇ ; ಇದಕ್ಕೆ ತೆಗೆದುಕೊಳ್ಳುವ ಕ್ರಮಗಳೇನು ? (ವಿವರ ನೀಡುವುದು)

## ಟೆಂಡರ್ ಶ್ಯೂರ್ ಯೋಜನೆಯಡಿ ನಿರ್ಮಿಸುತ್ತಿರುವ ಪಾದಚಾರಿ ಮಾರ್ಗಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೧೮ (೩೧೬೯) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ಟೆಂಡರ್ ಶ್ಯೂರ್ ಯೋಜನೆಯಡಿ ನಿರ್ಮಿಸಿರುವ ಪಾದಚಾರಿಗಳ ಮಾರ್ಗಗಳು ಯಾವುವು ;

(ಆ) ಈ ಕಾಮಗಾರಿಗಳು ಪ್ರಾರಂಭಗೊಂಡಿದ್ದು ಯಾವಾಗ ; ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ ; (ಪೂರ್ಣ ವಿವರ ನೀಡುವುದು)

(ಇ) ಟೆಂಡರ್ ಶ್ಯೂರ್ ಯೋಜನೆಯಡಿ ನಿರ್ಮಿತವಾಗುವ ಕಾಮಗಾರಿಗಳ ಟೆಂಡರ್ ನೀಡಿರುವ ಗುತ್ತಿಗೆದಾರರಿಗೆ ಇರಬೇಕಾದ ಅರ್ಹತೆಗಳೇನು ; (ಗುತ್ತಿಗೆದಾರರ ಪೂರ್ಣ ವಿವರ ನೀಡುವುದು)

(ಈ) ಈ ಯೋಜನೆಯಡಿ ನಿರ್ಮಿತವಾಗುವ ಪಾದಚಾರಿ ಮಾರ್ಗಗಳನ್ನು ಗುತ್ತಿಗೆದಾರರು ಎಷ್ಟು ವರ್ಷ ನಿರ್ವಹಣೆ ಮಾಡಬೇಕು ;

(ಉ) ಈ ಕಾಮಗಾರಿಗಳನ್ನು ಪ್ರಾರಂಭ ಮಾಡುವ ಮೊದಲು ಎಲ್ಲಾ ಇಲಾಖೆಗಳು ಸೇರಿ ಈ ಯೋಜನೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳೇನು ;

(ಊ) ಈ ಯೋಜನೆಯಡಿಯಲ್ಲಿ ನಿರ್ಮಿತವಾದ ಮೊದಲ ರಸ್ತೆಯನ್ನು ವಿದ್ಯುಚ್ಛಕ್ತಿ ಕಾಮಗಾರಿಗಾಗಿ ಅಗೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸದರಿ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

## ಬೆಂಗಳೂರು ನಗರದಲ್ಲಿ ರಸ್ತೆಗಳನ್ನು ಅಗೆಯಲಾಗುತ್ತಿರುವುದು ಸಂಸ್ಥೆಗಳ ಮಧ್ಯೆ ಸಮನ್ವಯದ ಕೊರತೆಯ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೩೧೯ (೩೧೨೨) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ನಡೆಯುತ್ತಿದ್ದು, ಪ್ರತಿ ತಿಂಗಳು ಒಂದಲ್ಲಾ ಒಂದು ಕಾರಣಗಳಿಂದ ರಸ್ತೆಗಳನ್ನು ಅಗೆಯಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಟೆಲಿಫೋನ್, ವಿದ್ಯುತ್, ಟಿವಿ ಕೇಬಲ್, ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ನಡುವೆ ಸಮನ್ವಯದ ಕೊರತೆಯಿಂದ ಈ ತರಹದ ಅವ್ಯವಸ್ಥೆಯುಂಟಾಗುತ್ತಿದ್ದು, ಈ ಎಲ್ಲಾ ಸಂಸ್ಥೆಗಳ ಮಧ್ಯೆ ಸಮನ್ವಯ ತರಲು ಸರ್ಕಾರ ಯೋಚಿಸಿದೆಯೇ ;

(ಇ) ಈ ತರಹದ ಸಮಸ್ಯೆಯನ್ನು ತಡೆಯಲು ಪರಿಣಾಮಕಾರಿ ಸಮನ್ವಯ ರೂಪಿಸುವುದರಿಂದ ರಸ್ತೆಗಳಿಗೆ ಆಗುವ ಹಾನಿಯನ್ನು ನಿಯಂತ್ರಣದಲ್ಲಿ ಇಡುವುದರೊಂದಿಗೆ ಸರ್ಕಾರದ ಬೊಕ್ಕಸಕ್ಕೆ ಆಗುವ ಖರ್ಚನ್ನು ಕಡಿಮೆ ಮಾಡುವುದರೊಂದಿಗೆ, ಸಾರ್ವಜನಿಕರಿಗೂ ಹಾಗೂ ವಾಹನಗಳ ಚಲನವಲನಗಳಿಗೂ ಅನುಕೂಲವಾಗುವುದರ ಬಗ್ಗೆ ಸರ್ಕಾರದ ನಿಲುವೇನು ?

## ಮುಖ್ಯಮಂತ್ರಿಗಳ ಕೌಶಲ್ಯಾಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತ ಯುವಕರು ತರಬೇತಿ ಪಡೆಯುವ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) –**

೩೨೦ (೩೧೧೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಖ್ಯಮಂತ್ರಿಗಳ ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರಿಂದ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಕೌಶಲ್ಯಾಭಿವೃದ್ಧಿ ಯೋಜನೆಯಡಿ ಯಾವ ಯಾವ ಉದ್ಯೋಗಕ್ಕೆ ತರಬೇತಿ ನೀಡಲಾಗುವುದು ;

(ಇ) ಕೌಶಲ್ಯಾಭಿವೃದ್ಧಿ ಯೋಜನೆಗೆ ಇರುವ ಮಾನದಂಡವೇನು ;

(ಈ) ಅಲ್ಪಸಂಖ್ಯಾತ ಯುವಕರು ಮುಖ್ಯಮಂತ್ರಿಗಳ ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ತರಬೇತಿ ಪಡೆದು ಸ್ವಯಂ ಉದ್ಯೋಗ ಮಾಡಲು ಸರ್ಕಾರದಿಂದ ಸಹಾಯ ನೀಡಲಾಗುವುದೇ ? (ವಿವರ ನೀಡುವುದು)

## ಸಿಲಿಕಾನ್ ಸಿಟಿ ಬೆಂಗಳೂರಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೧ (೩೧೮೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಲಿಕಾನ್ ಸಿಟಿ ಬೆಂಗಳೂರು ಮಹಾನಗರದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಹಾಡು ಹಗಲೇ ಕೊಲೆಗಳಂತಹ ಗಂಭೀರ ಅಪರಾಧಗಳು ಜರುಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಅಪರಾಧಗಳ ಪ್ರಕರಣಗಳ ನಿಯಂತ್ರಣಕ್ಕೆ ಹಾಗೂ ಸಾರ್ವಜನಿಕರ ರಕ್ಷಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು ; ಗಂಭೀರ ಸ್ವರೂಪದ ಅಪರಾಧಗಳ ತಡೆಗೆ ಸರ್ಕಾರ ತೆಗೆದುಕೊಂಡ ಮುಂಜಾಗ್ರತಾ ಕ್ರಮಗಳೇನು ; (ವಿವರ ನೀಡುವುದು)

(ಇ) ೨೦೧೪–೧೫, ೨೦೧೫–೧೬, ೨೦೧೬–೧೭ನೇ ಸಾಲಿನಲ್ಲಿ ನಗರದಲ್ಲಿ ದಾಖಲಾದ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಮಕ್ಕಳ ಮತ್ತು ಮಹಿಳೆಯ ಮೇಲಿನ ದೌರ್ಜನ್ಯಗಳೆಷ್ಟು ; ಗಂಭೀರ ಸ್ವರೂಪದ

ಪ್ರಕರಣಗಳೆಷ್ಟು ; ಒಟ್ಟು ಕೊಲೆಯಾದ ಮುಖಂಡರುಗಳ ಸಂಖ್ಯೆ ಎಷ್ಟು ; ರಾಜಕೀಯ ದ್ವೇಷ ಹಾಗೂ ಕೋಮುವಾದದ ಹಿನ್ನಲೆ ಕೊಲೆ ಪ್ರಯತ್ನಗಳೆಷ್ಟು ; (ವಿವರ ನೀಡುವುದು)

(ಈ) ಇವುಗಳ ತನಿಖೆಯು ಯಾವ ಹಂತದಲ್ಲಿವೆ ; ಎಷ್ಟು ಕೋಮುವಾದ ಕೊಲೆ ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ ? (ವಿವರ ನೀಡುವುದು)

## ಇಂಡಿಯನ್ ಜಮ್‌ಖಾನ್ ಆಟದ ಮೈದಾನದ ಬಗ್ಗೆ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೩೨೨ (೩೧೭೫) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಕಾಕ್ಸ್‌ಟೌನ್ (ಹಾಲಿ ಸರ್ವಜ್ಞನಗರ)ನಲ್ಲಿರುವ ಇಂಡಿಯನ್ ಜಮ್‌ಖಾನ್ ಆಟದ ಮೈದಾನದಲ್ಲಿ ಸಾರ್ವಜನಿಕರಿಗೆ ೩ ಎಕರೆ ೧೩ ಗುಂಟೆ ಜಮೀನನ್ನು ಹಾಗೂ ಇಂಡಿಯನ್ ಜಮ್‌ಖಾನ್ ಕ್ಲಬ್‌ಗೆ ೧ ಎಕರೆ ೦೮ ಗುಂಟೆ ಜಮೀನನ್ನು ನೀಡಲು ಆದೇಶವಾಗಿದೆಯೇ ; ಆಗಿದ್ದಲ್ಲಿ, ಅದರಂತೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; ಇಲ್ಲದಿದ್ದಲ್ಲಿ, ಕಾರಣವೇನು ;

(ಆ) ೧೯೯೪ ರಿಂದಲೂ ನ್ಯಾಯಾಲಯಗಳ, ಉಪ ಲೋಕಾಯುಕ್ತರ ಹಾಗೂ ಸರ್ಕಾರದ ಆದೇಶಗಳನ್ನು ಕ್ಲಬ್‌ನವರು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು ;

(ಇ) ನ್ಯಾಯಾಲಯಗಳ ಹಾಗೂ ಸರ್ಕಾರದ ಆದೇಶಗಳನ್ನು ಅನುಷ್ಠಾನಗೊಳಿಸದಿರಲು ಕಾರಣಗಳೇನು ; (ಪೂರ್ಣ ವಿವರ ಒದಗಿಸುವುದು)

(ಈ) ನ್ಯಾಯಾಲಯ ಹಾಗೂ ಸರ್ಕಾರದ ಆದೇಶದ ರೀತ್ಯಾ ಸದರಿ ಮೈದಾನದ ೩ ಎಕರೆ ೧೩ ಗುಂಟೆ ಜಾಗವನ್ನು ಸರ್ಕಾರದ ವಶಕ್ಕೆ ಪಡೆದು ಹಾಲಿ ಇರುವ ಕಟ್ಟಡಗಳನ್ನು ತೆರವುಗೊಳಿಸಿ, ಸಾರ್ವಜನಿಕರ ಕ್ರೀಡಾ ಚಟುವಟಿಕೆಗಳಿಗೆ ಮೀಸಲಿರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

## ನೋಂದಾಯಿತ ಕ್ಲಬ್‌ಗಳ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೩ (೩೧೪೩+೩೦೭೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ನೋಂದಾಯಿತ ಕ್ಲಬ್‌ಗಳ ಒಟ್ಟು ಸಂಖ್ಯೆ ಎಷ್ಟು ; ಅವು ಯಾವುವು ; (ಸ್ಥಾಪನೆಗೊಂಡ ದಿನಾಂಕ ಸಹಿತ ವಿವರ ನೀಡುವುದು)

(ಆ) ಸದರಿ ಕ್ಲಬ್‌ಗಳಿಗೆ ಗುತ್ತಿಗೆ ಆಧಾರದ ಮೇಲೆ ಸರ್ಕಾರದಿಂದ ಒದಗಿಸಲಾಗಿರುವ ಜಮೀನು ಎಷ್ಟು ; ಮತ್ತು ಅದಕ್ಕೆ ನಿಗದಿಪಡಿಸಿರುವ ಬಾಡಿಗೆ ಮೊತ್ತವೆಷ್ಟು ;

(ಇ) ಸದರಿ ಕ್ಲಬ್‌ಗಳಿಗೆ ಯಾವ ದಿನಾಂಕದಿಂದ ಕರಾರು ಒಪ್ಪಂದ (ಲೀಸ್)ವನ್ನು ನೀಡಲಾಗಿರುತ್ತದೆ ; ಇದರಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು ; (ವರ್ಷಾವಾರು ವಿವರ ನೀಡುವುದು)

(ಈ) ಯಾವ ಉದ್ದೇಶಕ್ಕಾಗಿ ಕ್ಲಬ್‌ಗಳನ್ನು ಸ್ಥಾಪಿಸಿ ರಚಿಸಲಾಗಿದೆ ; ಸದರಿ ಉದ್ದೇಶದ ಅನ್ವಯ ಕ್ಲಬ್‌ಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿವೆಯೇ ;

(ಉ) ಹಾಗಿದ್ದಲ್ಲಿ, ಉದ್ದೇಶವನ್ನು ಉಲ್ಲಂಘಿಸಿರುವ ಕ್ಲಬ್‌ಗಳು ಯಾವುವು ; (ವಿವರ ನೀಡುವುದು)

(ಊ) ಎಲ್ಲಾ ಕ್ಲಬ್‌ಗಳು ಕನಿಷ್ಠ ೧೦ ವರ್ಷಗಳ ಲಾಭ/ನಷ್ಟ ಹಾಗೂ ಉಳಿತಾಯದ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಡಲಾಗಿದೆಯೇ ; ಹಾಗಿದ್ದಲ್ಲಿ, ವಿವರಗಳನ್ನು ಒದಗಿಸುವುದು ?

## ಲೋಕಾಯುಕ್ತ ಇಲಾಖೆ ದಾಳಿ ನಡೆಸಿರುವ ಅಧಿಕಾರಿಗಳ ವಿವರ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೩೨೪ (೩೧೩೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೦ನೇ ಸಾಲಿನಿಂದ ಇದುವರೆವಿಗೆ ಲೋಕಾಯುಕ್ತ ಸಂಸ್ಥೆಯವರು ರಾಜ್ಯದ ಎಷ್ಟು ಸರ್ಕಾರಿ ನೌಕರರ ಮೇಲೆ ದಾಳಿ ನಡೆಸಿರುತ್ತಾರೆ ; (ಹೆಸರು ವಿಳಾಸ ಸಹಿತ ವಿವರ ನೀಡುವುದು)

(ಆ) ಲೋಕಾಯುಕ್ತ ದಾಳಿ ಸಂದರ್ಭದಲ್ಲಿ ಕಂಡು ಹಿಡಿದಿರುವ ಅಕ್ರಮ ಸಂಪತ್ತನ್ನು ವಶಪಡಿಸಿಕೊಳ್ಳಲಾಗಿದೆಯೇ ; (ವಿವರ ನೀಡುವುದು)

(ಇ) ಅಕ್ರಮ ನಡೆಸಿರುವುದು ಸಾಬೀತಾಗಿರುವ ಎಷ್ಟು ಅಧಿಕಾರಿಗಳ ಮೇಲೆ ಇದುವರೆವಿಗೆ ಕ್ರಮ ಕೈಗೊಳ್ಳಲಾಗಿದೆ ; (ಹೆಸರು ವಿಳಾಸ ಸಹಿತ ವಿವರ ನೀಡುವುದು)

(ಈ) ಅಕ್ರಮಗಳು ಸಾಬೀತಾಗಿದ್ದರೂ, ಇದುವರೆವಿಗೆ ಕ್ರಮ ಕೈಗೊಳ್ಳದ ಅಧಿಕಾರಿಗಳು ಯಾರು ; (ವಿವರ ನೀಡುವುದು) ಯಾವ ಕಾರಣದಿಂದ ಕ್ರಮ ಕೈಗೊಂಡಿರುವುದಿಲ್ಲ ; (ವಿವರ ನೀಡುವುದು)

(ಉ) ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರವರು ಮಾಡಿರುವ ಅಕ್ರಮಗಳು ಸಾಬೀತಾಗಿದ್ದರೂ, ಇದುವರೆವಿಗೆ ಅವರ ವಿರುದ್ಧ ಕ್ರಮ ಕೈಗೊಳ್ಳದಿರಲು ಕಾರಣಗಳೇನು ? (ವಿವರ ನೀಡುವುದು)

## ಬೀದರ್ ಜಿಲ್ಲೆಯ ನಗರಾಭಿವೃದ್ಧಿ ಇಲಾಖೆಯ ಕಾಮಗಾರಿಗಳ ಬಗ್ಗೆ

**ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೫ (೩೧೫೧) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ಹಮ್ಮಿಕೊಂಡಿರುವ ಕಾಮಗಾರಿಗಳು ಯಾವುವು ; (ವಿವರ ನೀಡುವುದು)

(ಆ) ಈ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು ; (ಕಾಮಗಾರಿವಾರು ವಿವರ ನೀಡುವುದು)

(ಇ) ಅನುದಾನ ಬಿಡುಗಡೆಯಾಗಿರುವ ಕಾಮಗಾರಿಗಳು ಪೂರ್ಣಗೊಂಡಿವೆಯೇ ; ಪೂರ್ಣಗೊಂಡ ಕಾಮಗಾರಿಗಳು ಯಾವುವು ; (ವಿವರ ನೀಡುವುದು)

(ಈ) ಬೀದರ್ ಜಿಲ್ಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯಲ್ಲಿ ಇರುವ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ; ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ನಗರ ಭೂ ಪರಿಮಿತಿ ಕಾಯಿದೆಯನ್ನು ವಾಪಸ್ಸು ಪಡೆದ ನಂತರವೂ ಭೂ ಪರಿಹಾರ ಪಡೆಯದ ಬೆಂಗಳೂರು ಜಿಲ್ಲೆಯ ರೈತರ ಭೂಮಿ ವಾಪಸ್ಸು ನೀಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೩೨೬ (೩೧೪೮) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ, ಸರ್ಕಾರವು ನಗರ ಭೂ ಪರಿಮಿತಿ ಕಾಯಿದೆಯನ್ನು ಯುಡಿಡಿ ೨೫ ಯುಎಲ್‌ಸಿ ೯೯ ಕ್ರಮಾಂಕದ ಸುತ್ತೋಲೆಯಂತೆ ವಾಪಸ್ಸು ಪಡೆದಿದ್ದು, ಐಎಲ್‌ಆರ್ ೨೦೦೪ ರಂತೆ ಸರ್ವೋಚ್ಚ ನ್ಯಾಯಾಲಯದಿಂದ ಭೂ ಪರಿಹಾರ ಪಡೆಯದಿರುವ ರೈತರ ಜಮೀನು ವಾಪಸ್ಸು ನೀಡುವಂತೆ ಆದೇಶವಾಗಿದ್ದು, ಸದರಿ ಆದೇಶದನ್ವಯ ಭೂ ಪರಿಹಾರವನ್ನು ಪಡೆಯದ ಬೆಂಗಳೂರು ನಗರದ ಸಾವಿರಾರು ರೈತರು ತಮ್ಮ ಜಮೀನುಗಳನ್ನು ಹಿಂತಿರುಗಿಸುವಂತೆ ಕೋರಿರುವುದು ನಿಜವೇ ; (ವಿವರ ನೀಡುವುದು)

(ಆ) ರೈತರುಗಳು ಈ ರೀತಿ ಕೋರಿ ಹತ್ತಾರು ವರ್ಷಗಳಾಗಿದ್ದರೂ ಇದುವರೆವಿಗೂ ಬಹಳಷ್ಟು ರೈತರುಗಳಿಗೆ ಜಮೀನು ಹಿಂದಿರುಗಿಸಲಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಇ) ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿ ಗ್ರಾಮದ ಸ.ನಂ. ೪೦/೬ರ ೦–೨೫ ಗುಂಟೆ ಜಮೀನನ್ನು ಹಿಂತಿರುಗಿಸುವಂತೆ ೨೦೧೩ರಲ್ಲಿ ಕೋರಿದ್ದರೂ, ಇದುವರೆವಿಗೂ ಹಿಂದಿರುಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ರೀತಿ ಹಲವಾರು ಪ್ರಕ್ರಿಯೆಗಳು ವಿಳಂಬವಾಗಿದ್ದು, ರೈತರಿಗೆ ಇದರಿಂದ ತೊಂದರೆಯಾಗಿದ್ದು, ಕೋರಿರುವ ರೈತರ ಜಮೀನುಗಳನ್ನು ಹಿಂತಿರುಗಿಸಿರುವ ಬಗ್ಗೆ ಸಾಮೂಹಿಕವಾಗಿ ಸರ್ಕಾರಿ ಆದೇಶ ಹೊರಡಿಸುವ ಬಗ್ಗೆ ಸರ್ಕಾರದ ನಿಲುವೇನು ?

## ಸಾರ್ವಜನಿಕ ಮತ್ತು ಸಂಪರ್ಕ ಇಲಾಖೆಯಿಂದ ಸಾರ್ವಜನಿಕರಿಗೆ ಸಿಗುತ್ತಿರುವ ಮಾಹಿತಿ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೭ (೩೧೨೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರದ ವತಿಯಿಂದ ಸಾರ್ವಜನಿಕರಿಗೆ ಸಿಗುತ್ತಿರುವ ಮಾಹಿತಿ ಫಲಕಗಳನ್ನು ಆಯ್ದ ಭಾಗಗಳಲ್ಲಿ (ಜನನಿಬಿಡ ಪ್ರದೇಶ) ರೈಲ್ವೆ ಸ್ಟೇಷನ್, ಬಸ್ ನಿಲ್ದಾಣ, ಜಾತ್ರೆ ನಡೆಯುವ ಸ್ಥಳ ಮತ್ತು ಇನ್ನಿತರ ಸ್ಥಳಗಳಲ್ಲಿ ಫ್ಲೆಕ್ಸ್ ಬೋರ್ಡ್‌ಗಳನ್ನು ಅಳವಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದುವರೆಗೂ ರಾಜ್ಯದ ವಾರ್ತಾ ಮತ್ತು ಸಂಪರ್ಕ ಇಲಾಖಾ ವತಿಯಿಂದ ಫ್ಲೆಕ್ಸ್ ಬೋರ್ಡ್‌ಗಳ ಮುಖಾಂತರ ಮಾಹಿತಿಗಳನ್ನು ಎಲ್ಲೆಲ್ಲಿ ಹಾಕಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ಸಕಾಲ ಸೇವೆ ವಿಸ್ತರಿಸುವ ಮತ್ತು ಇ-ಆಫೀಸ್ ತಂತ್ರಾಂಶದಿಂದ ಪಾರದರ್ಶಕ ಆಡಳಿತ ಜಾರಿಗೆ ತರುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೮ (೩೧೯೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಕಚೇರಿಗಳಲ್ಲಿ ಪತ್ರ ವ್ಯವಹಾರಗಳು, ಕಡತ ವಿಲೇವಾರಿ ಅತೀ ವಿಳಂಬವಾಗಿರುವುದರೊಂದಿಗೆ ಸರ್ಕಾರಿ ವ್ಯವಸ್ಥೆ ಮತ್ತು ಆಡಳಿತ ಯಂತ್ರ ಜಡ್ಡು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸರ್ಕಾರಿ / ಅರೆ ಸರ್ಕಾರಿ ಕಚೇರಿಗಳಲ್ಲಿ ಆಡಳಿತವನ್ನು ಕಾಗದರಹಿತಗೊಳಿಸಿ ಪಾರದರ್ಶಕತೆ ತರಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇ-ಆಫೀಸ್ ತಂತ್ರಾಂಶವನ್ನು ಗ್ರಾಮ ಪಂಚಾಯತ್‌ಗಳು ಸೇರಿದಂತೆ ಎಲ್ಲಾ ಜಿಲ್ಲಾ-ತಾಲ್ಲೂಕು ಮಟ್ಟದ ಕೆಳ ಹಂತದ ಕಚೇರಿಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಸರ್ಕಾರದ ಯಾವ ಇಲಾಖೆ, ನಿಗಮ, ಕಚೇರಿಗಳನ್ನು ಕಾಗದ ರಹಿತ ಕಚೇರಿಗಳನ್ನಾಗಿ ಮಾಡಲಾಗಿದೆ ; ಯಾವ ಯಾವ ಇಲಾಖೆ, ನಿಗಮ, ಸಂಸ್ಥೆ ಒಟ್ಟು ಎಷ್ಟು ಸೇವೆಗಳನ್ನು ಸಕಾಲ ವ್ಯಾಪ್ತಿಗೆ ತರಲಾಗಿದೆ ; ಮುಂದೆ ಯಾವ ಯಾವ ಇಲಾಖೆಯ ಯಾವ ಸೇವೆಗಳನ್ನು ಸಕಾಲ ಸೇವೆ ವ್ಯಾಪ್ತಿಗೆ ತರಲಾಗುವುದು ;

(ಈ) ನಿಷ್ಕ್ರಿಯಗೊಂಡ ಸರ್ಕಾರಿ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಲು ಇ-ಆಫೀಸ್ ತಂತ್ರಾಂಶವನ್ನು ಪ್ರತೀ ಕಚೇರಿಗೆ ಅಳವಡಿಸಲು, ಸಕಾಲ ಸೇವೆಗಳನ್ನು ಪ್ರತಿಯೊಂದು ಇಲಾಖೆಗೆ ವಿಸ್ತರಿಸಲು ಹಾಗೂ ಪ್ರತಿ ಇಲಾಖೆಯ ಎಲ್ಲಾ ಆದೇಶದ ಪ್ರತಿ ಮತ್ತು ಕಡತಗಳ ಚಲನವಲನಗಳನ್ನು ಆನ್-ಲೈನ್ ಮೂಲಕ ಲಭ್ಯವಾಗಿಸುವುದರೊಂದಿಗೆ ಪಾರದರ್ಶಕ ಭ್ರಷ್ಟಾಚಾರ ಮುಕ್ತ ಆಡಳಿತ ವ್ಯವಸ್ಥೆಯನ್ನು ಸಾರ್ವಜನಿಕರಿಗೆ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಆಸ್ತಿಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೯ (೩೧೦೬) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಎಷ್ಟು ಆಸ್ತಿಗಳು ಪಾಲಿಕೆಯ ಮಾಲೀಕತ್ವದಲ್ಲಿವೆ ; ಅವುಗಳು ಯಾವುವು ; ಇವುಗಳಲ್ಲಿ ಎಷ್ಟು ಅತಿಕ್ರಮಣವಾಗಿವೆ ; ಗುರುತಿಸಲ್ಪಟ್ಟಿರುವುದು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಆ) ಶಾಲೆ ಹಾಗೂ ಉದ್ಯಾನವನಕ್ಕೆ ಮೀಸಲಿಟ್ಟ ಆಸ್ತಿಗಳು ಸಹ ಅತಿಕ್ರಮಣವಾಗಿವೆಯೇ ; ಇವು ಗುರುತಿಸಲ್ಪಟ್ಟಿವೆಯೇ ; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಸರ್ಕಾರ ಈ ಕುರಿತು ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಮೂಡಿಗೆರೆ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೩೩೦ (೩೧೩೯) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೂಡಿಗೆರೆ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ ಸರ್ಕಾರವು ಯೋಜನೆಯನ್ನು ರೂಪಿಸಲಾಗಿದೆಯೇ ; ಈ ಯೋಜನೆಗೆ ಸರ್ಕಾರದ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ದೊರಕಿದೆಯೇ ;

(ಆ) ಈ ಯೋಜನೆಯ ಅಂದಾಜು ಮೊತ್ತ ಎಷ್ಟು ; ಈ ಯೋಜನೆಗೆ ಅನುಮೋದನೆ ನೀಡಲು ಸರ್ಕಾರ ತಡ ಮಾಡಲು ಕಾರಣವೇನು ?

ಶ್ರೀನಿವಾಸ
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 245 – ಪ್ರ5